ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ.ಬಿ.ವಿ ವಕೀಲರಿಂದಃ-

ನಾನು ಮದರಸಾಬರದೊಡ್ಡಿಯಲ್ಲಿ ವಾಸವಿರುತ್ತೇನೆ. ನಾನು ಯಾವತ್ತಿಗೂ ರಾಮನಗರದಲ್ಲಿ ವಾಸವಿರವುದಿಲ್ಲ. ನನ್ನ ಹೆಂಡತಿರವರು ಶಿಕ್ಷಕರಾಗಿರುತ್ತಾರೆ ಎಂದರೆ ಸರಿ. ವಾದಿರವರು ನನಗೆ ಸುಮಾರು 20 ವರ್ಷಗಳಿಂದ ಪರಿಚಯ ಇರುತ್ತಾರೆ. ನಾನು ಬಿ.ಎ. ಪದವಿಧರನಾಗಿರುತ್ತೇನೆ. ನಾನು ಹಿಂದೆ ವ್ಯವಸಾಯ ಮಾಡಿಕೊಂಡಿದ್ದೆನು, ಈಗ ಏನೂ ಕೆಲಸ ಮಾಡುತ್ತಿಲ್ಲ. 1 ನೇ ಪ್ರತಿವಾದಿರವರ ಗಂಡ ರಮೇಶ್ ನನಗೆ ಸುಮಾರು 20 ವರ್ಷಗಳಿಂದ ಪರಿಚಯ ಇರುತ್ತಾರೆ.

ಸಾಕ್ಷಿಗೆ ನೀವು ಇದುವರೆಗೂ ಎಷ್ಟು ನೋಂದಾಯಿತ ದಾಖಲೆಗಳಿಗೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ 2 ಪತ್ರಗಳಿಗೆ ಮಾಡಿರುತ್ತೇನೆ. ನಾನು ಯಾವ ಯಾವ ಪತ್ರಗಳಿಗೆ ಸಾಕ್ಷಿ ಸಹಿ ಮಾಡಿರುತ್ತೇನೆ ಎಂದು ಹೇಳಲು ಈಗ ಸಾಧ್ಯವಿಲ್ಲ. ಸಾಕ್ಷಿಗೆ 1 ನೇ ಪ್ರತಿವಾದಿಯನ್ನು ನೀವು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡಿರುತ್ತೇನೆ ಎಂದರೆ ಸಾಕ್ಷಿ ಈ ಹಿಂದೆ ಒಂದು ಬಾರಿ ಮತ್ತು ನ್ಯಾಯಾಲಯದಲ್ಲಿ ನೋಡಿರುತ್ತೇನೆ.

ನಿಪಿ-1 ಬರಹಗಾರಾದ ಬೈರಯ್ಯನವರು ನನಗೆ 25 ವರ್ಷಗಳಿಂದ ಪರಿಚಯ ಇರುತ್ತಾರೆ. ನನ್ನ ವೈಯಕ್ತಿಕ ದಾಖಲೆಗಳನ್ನು ಸದರಿ ಬೈರಯ್ಯನವರಿಂದ ಬರೆಸಿರುವುದಿಲ್ಲ. ಮೆಳೆಹಳ್ಳಿ ಪ್ರಕಾಶ್ ರವರು ನನಗೆ ಸುಮಾರು 25 ವರ್ಷಗಳಿಂದ

ಪರಿಚಯ ಇರುತ್ತಾರೆ. ಅವರು ಏನು ಕೆಲಸ ಮಾಡಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ, ಸದರಿರವರು ತಾಲ್ಲೂಕು ಕಛೇರಿಗೆ ಬರುತ್ತಿದ್ದರಿಂದ ಅವರು ನನಗೆ ಪರಿಚಯ ಇರುತ್ತಾರೆ. ನಾನು ಸಹ ತಾಲ್ಲೂಕು ಕಛೇರಿಯಲ್ಲಿ ಕೆಲಸ ಇದ್ದಾಗ ಹೋಗಿ ಬರುತ್ತಿದ್ದೆನು. ಬೈರಯ್ಯನವರು ತಯಾರು ಮಾಡಿದ ಎಷ್ಟು ಪತ್ರಗಳಿಗೆ ಸಾಕ್ಷಿ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿ ನನಗೆ ಈಗ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ಈ ದಾವೆಗೆ ಸಂಬಂಧಿಸಿದಂತೆ ನಿಪಿ-1 ರ ಕರಾರು ಪತ್ರವಾಗುವ ಸಮಯದಲ್ಲಿ ಸಬ್ ರಿಜಿಸ್ಟ್ರಾರ್ ಕಛೇರಿಗೆ ಹೋಗಿ ಬಂದಿರುವುದಿಲ್ಲ. ವಾದಿ ರಾಮಕೃಷ್ಣಯ್ಯನವರ ಮನೆಯ ವಿಳಾಸ ನನಗೆ ತಿಳಿದಿರುವುದಿಲ್ಲ. 1 ನೇ ಪ್ರತಿವಾದಿಯ ಗಂಡನಾದ ರಮೇಶ್ ರವರ ಮನೆಯ ವಿಳಾಸವನ್ನು ಸಹ ನನಗೆ ತಿಳಿದಿರುವುದಿಲ್ಲ. ನಿಪಿ-1 ರ ಕರಾರು ಪತ್ರದ ವ್ಯವಹಾರದ ಬಗ್ಗೆ ನನಗೆ ಮಾಹಿತಿ ಇರುತ್ತದೆ. ನಿಪಿ-1 ರಂತೆ ವ್ಯವಹಾರ ಆಗುವ ಸಮಯ ಯಾರು ಯಾರು ಇದ್ದರು ಎಂದರೆ ಸಾಕ್ಷಿಯು ನಾನು, ವಾದಿ ರಾಮಕೃಷ್ಣಯ್ಯ, 1 ನೇ ಪ್ರತಿವಾದಿಯ ಗಂಡ ರಮೇಶ್, 1 ನೇ ಪ್ರತಿವಾದಿ ಹಾಜರಿದ್ದೆವು. ನಿಪಿ-1 ರ ಷೆಡ್ಯೂಲ್ ಸ್ವತ್ತಿಗೆ ಎಷ್ಟು ಬೆಲೆ ಬಾಳುತ್ತಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಸ್ವತ್ತಿನ ಮೂಲ ದಾಖಲೆಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ಆ ದಿನ ಯಾವ ಯಾವ ದಾಖಲೆಗಳನ್ನು ತಂದಿದ್ದರು ಸಹ ಎಂದು ನನಗೆ ತಿಳಿದಿರುವುದಿಲ್ಲ.

ನಿಪಿ-1 ರ ಕರಾರು ಪತ್ರವನ್ನು ಬೈರಯ್ಯನವರು ತಯಾರು ಮಾಡಿರುತ್ತಾರೆ ಎಂದರೆ ಸರಿ. ಸದರಿ ಬೈರಯ್ಯನವರ ವಿರುದ್ಧ ಸುಳ್ಳು

ದಾಖಲೆಗಳನ್ನು ಸೃಷ್ಟಿಸಿ ನೋಂದಣಿ ಮಾಡಿಸಿರುತ್ತಾರೆ ಎಂದು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಪ್ರಕರಣ ದಾಖಲಾಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನನಗೆ ಋಣಬಾರ ರಾಹಿತ್ಯ ಪ್ರಮಾಣ ಪತ್ರದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ನಾನು ದಾವಾ ಆಸ್ತಿಗೆ ಸಂಬಂಧಿಸಿದಂತೆ ಋಣಬಾರ ರಾಹಿತ್ಯ ಪ್ರಮಾಣ ಪತ್ರವನ್ನು ನೋಡಿರುವುದಿಲ್ಲ.

ಸೋಮಶೇಖರ ರೆಡ್ಡಿ ಎನ್ನುವವರ ಪರಿಚಯ ಇರುವುದಿಲ್ಲ. ನಿಡಿ-4 ರಲ್ಲಿ 2 ನೇ ಸಾಕ್ಷಿದಾರನಾಗಿ ಮಾಡಿರುವ ಸಹಿ ನನ್ನದೆ ಆಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಡಿ-4(ಎ) ಎಂದು ಗುರುತಿಸಲಾಯಿತು. ನಿಡಿ-4 ನ್ನು ಸಹ ಪತ್ರ ಬರಹಗಾರರಾದ ಬೈರಯ್ಯನವರೇ ತಯಾರಿಸಿರುತ್ತಾರೆ ಎಂದರೆ ಸರಿ. ನಿಡಿ-5 ರಲ್ಲಿ 1 ನೇ ಸಾಕ್ಷಿದರನಾಗಿ ಮಾಡಿರುವ ಸಹಿ ನನ್ನದೇ ಆಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಡಿ-5(ಎ) ಎಂದು ಗುರತಿಸಲಾಯಿತು. ನಿಡಿ-5 ನ್ನು ಸಹ ಪತ್ರ ಬರಹಗಾರರಾದ ಬೈರಯ್ಯನವರೇ ತಯಾರಿಸಿರುತ್ತಾರೆ ಎಂದರೆ ಸರಿ. ನಿಡಿ-6 ರಲ್ಲಿ 2 ನೇ ಸಾಕ್ಷಿದಾರನಾಗಿ ಮಾಡಿರುವ ಸಹಿ ನನ್ನದೆ ಆಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಡಿ-6(ಎ) ಎಂದು ಗುರುತಿಸಲಾಯಿತು. ನಿಡಿ-6 ನ್ನು ಸಹ ಪತ್ರ ಬರಹಗಾರರಾದ ಬೈರಯ್ಯನವರೇ ತಯಾರಿಸಿರುತ್ತಾರೆ ಎಂದರೆ ಸರಿ.

1 ನೇ ಪ್ರತಿವಾದಿಯ ಗಂಡನವರ ತಂದೆ ರಾಮನಗರ ನ್ಯಾಯಾಲಯದಲ್ಲಿ ವಕೀಲರಾಗಿ ಕೆಲಸ ಮಾಡುತ್ತಿದ್ದರು ಮತ್ತು ಅವರ ಹೆಸರು ಬೋರಲಿಂಗಯ್ಯ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ

ಎಂದು ನುಡಿಯುತ್ತಾರೆ. ಸದರಿ ರಮೇಶ್ ರವರಿಗೆ ಎಷ್ಟು ಜನ ಮಕ್ಕಳು ಎಂದು ನನಗೆ ತಿಳಿದಿರುವುದಿಲ್ಲ. ರಮೇಶ್ ರವರಿಗೆ ಮೊದಲನೇ ಹೆಂಡತಿ ಮಾಲತಿ ಮತ್ತು ಅವರಿಗೂ ಒಬ್ಬ ಮಗ ಇರುವ ಬಗ್ಗೆ ನನಗೆ ತಿಳಿದಿರುವುದಿಲ್ಲ.

ಮೇಲೆ ಹೇಳಿದಂತೆದಾವಾ ಆಸ್ತಿಯ ಮಾತುಕತೆಯಲ್ಲಿ 1 ನೇ ಪ್ರತಿವಾದಿಯಗಂಡನ ಮನೆಯ ಕಡೆಯವರ ಬಗ್ಗೆ ಚರ್ಚೆಯಾಗಿಯಾಗಿರುವುದಿಲ್ಲ, ಅದೇ ಸಮಯದಲ್ಲಿದಾವಾ ಆಸ್ತಿಯು ಹೇಗೆ ಬಂದಿರುತ್ತದ, ಮೂಲ ಯಾವುದು ಎಂದು ಸಹ ನಾನು ತಿಳಿದುಕೊಂಡಿರುವುದಿಲ್ಲ. ದಾವಾ ಆಸ್ತಿಯು ರಾಮನಗರ ಹೃದಯ ಭಾಗದಲ್ಲಿ ಇರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಖಾತಾ ನಂಬರ್, ಚಕ್ ಬಂದಿ ಮತ್ತು ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ದಾವಾ ಆಸ್ತಿಯು ಎಷ್ಟು ಹಂತಸ್ತಿನ ಕಟ್ಟಡವಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ.

1 ನೇ ಪ್ರತಿವಾದಿಯ ಗಂಡನಾದ ರಮೇಶ ರವರು ತೀರಿಕೊಂಡಿದ್ದು, ಅವರು ಮೃತ ದೇಹವು ಧರ್ಮಸ್ಥಳದಲ್ಲಿ ಸಿಕ್ಕಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. 1 ನೇ ಪ್ರತಿವಾದಿರವರು ರಮೇಶ್ ರವರ 2 ನೇ ಹೆಂಡತಿ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ರಮೇಶ್ ರವರು ದುಷ್ಚಟಗಳಿಗೆ ಒಳಗಾಗಿದ್ದರು ಎಂದರೆ ಸರಿಯಲ್ಲ.

ನಾನು ಹರಿಸಂದ್ರ ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದೇನೆ ಎಂದರೆ ಸರಿ. ವಾದಿ ರಾಮಕೃಷ್ಣಯ್ಯನವರು ಸಹ ರಾಜಕೀಯ

ಒಡನಾಟ ಇರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯು ಸುಮಾರು 1 ಕೋಟಿಗಿಂತಲೂ ಹೆಚ್ಚಿನ ಬೆಲೆ ಬಾಳುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ವಾದಿರವರ ಬಳಿ ನಿಪಿ-1 ರ ಕರಾರು ಪತ್ರವಾಗುವ ಪೂರ್ವದಲ್ಲ ಎಷ್ಟು ಹಣ ಇತ್ತು ಎಂದು ನನಗೆ ತಿಳಿದಿರುವುದಿಲ್ಲ, ಸದರಿರವರುಕರಾರು ಪತ್ರವಾಗುವ ಸಮಯದಲ್ಲಿಕ್ರಯದ ಮುಂಗಡವನ್ನು ಎಲ್ಲಿ ತಂದಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. 1 ನೇ ಪ್ರತಿವಾದಿರವರ ಹೆಸರಿನಲ್ಲಿ ದಾವಾ ಆಸ್ತಿ ಇರಲಿಲ್ಲ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಗಂಡ ಅಥವಾ 1 ನೇ ಪ್ರತಿವಾದಿರವರು ವಾದಿಗೆ ಯಾವತ್ತಿಗೂ ಸ್ವಇಚ್ಛೆಯಿಂದ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ 1 ನೇ ಪ್ರತಿವಾದಿರವರು ನಿಪಿ-1 ರಲ್ಲಿ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು, ಮೆಳೆಹಳ್ಳಿ ಪ್ರಕಾಶ್ ಮತ್ತು ಪತ್ರ ಬರಹಗಾರರದ ಬೈರಯ್ಯನವರು ಸೇರಿ ನಿಪಿ-1 ರ ಕರಾರು ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡ ರಮೇಶ್ ದುಷ್ಚಟ ಹೊಂದಿದ್ದರಿಂದ ಅದರ ದುರುಪಯೋಗಪಡಿಸಿಕೊಂಡು ನಿಪಿ-1 ರ ಕರಾರು ಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ-1 ರ ಕರಾರು ಪತ್ರದಲ್ಲಿ ಗುರುತಿಸಿರುವ ಎಂದು ಸಹಿ ಮಾಡಿರುವ ವಿಳಾಸ ಬೈರಲಿಂಗಯ್ಯ ಬಿನ್ ಸಿದ್ದಪ್ಪ ಎಂದು

ತೋರಿಸಿರುವುದು ನಾನ, ಅದರಲ್ಲಿ ತೋರಿಸಿರುವ ಎಂ.ಎಸ್.ದೊಡ್ಡಿ, ಹರಿಸಂದ್ರ ಅಂಚೆ, ರಾಮನಗರ ವಿಳಾಸ ನನ್ನದೇ ಆಗಿರುತ್ತದೆ.

ನ್ಯಾಯಾಲಯದ ಪ್ರಶ್ನೆ ನಿಪಿ-1 ರ 8 ನೇ ಪುಟದಲ್ಲಿ ನಿಮ್ಮ ಸಹಿ ಇರುತ್ತದೆಯೇ ಎಂದರೆ ಸಾಕ್ಷಿಯು ಸದರಿ ಪುಟವನ್ನು ನೋಡಿ ನನ್ನ ಸಹಿ ಇರುತ್ತದೆ ಎಂದು ನುಡಿಯುತ್ತಾರೆ.

ನಿಪಿ-1 ರ 8 ನೇ ಪುಟದಲ್ಲಿ ಗುರುತಿಸಿರುವವರು ಎಂದು ಇರುವ 2 ಸಹಿಗಳು ಪ್ರಕಾಶ್ ರವರೇ ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ 8 ನೇ ಪುಟದಲ್ಲಿ ನನ್ನ ಹೆಸರಿನ ಮುಂಭಾಗ ಸಹಿ ಮಾಡುವ ಜಾಗದಲ್ಲಿ ಖಾಲಿ ಇರುತ್ತದೆ ಎಂದರೆ ಸರಿ, ಸಾಕ್ಷಿ ಮುಂದುವರೆದು ಮೇಲೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ಸಹಿ ಮಾಡಿರುವ ಜಾಗ ಪ್ರಕಾಶ್ ರವರು ಸಹಿ ಮಾಡುವ ಜಾಗವಾಗಿರುತ್ತದೆ ಎಂದರೆ ಸರಿ. ನಾನು ನಿಡಿ-4(ಎ) ರಿಂದ ನಿಪಿ-6(ಎ)ರಂತೆ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಾನು ಎಲ್ಲಾ ಕಡೆಯು ಅದೇ ರೀತಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ಸಾಕ್ಷಿಗೆ ನಿಪಿ-1 ರ 8 ನೇ ಪುಟದಲ್ಲಿ ಇರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1(ಇ) ಎಂದು ಗುರುತಿಸಲಾಯಿತು. ನಿಪಿ-1(ಇ) ರಂತೆ ನನ್ನ ಸಹಿಯನ್ನು ನಿಡಿ-4 ರಿಂನಿಡಿ-6 ರಲ್ಲಿಯೂ ಎಲ್ಲಿಯೂ ಮಾಡಿರುವುದಿಲ್ಲ ಎಂದರೆ ಸರಿ. ನಿಪಿ-1(ಇ)ರಂತೆ ಸಹಿ ಇರುವ ಬೇರೆ ಯಾವುದೇ ನೋಂದಾಯಿತ ದಾಖಲೆಗಳು ಇರುವುದಿಲ್ಲ ಎಂದರೆ ಸರಿ. ನಿಪಿ-1(ಇ)ರಂತೆ ಇರುವ ಸಹಿ ನನ್ನ ಸಹಿಯಾಗಿಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡಲು ನನ್ನದೇ ಸಹಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1(ಇ)ರಂತೆ

ಸಹಿಯನ್ನು ನಾನು ಬೈರಪ್ಪನವರ ಕಛೇರಿಯಲ್ಲಿ ಮಾಡಿರುತ್ತೇನೆ.

ಕ್ರಯದ ಮುಂಗಡ ಹಣವನ್ನು ವಾದಿರವರು ಬೈರಯ್ಯನವರ ಕಛೇರಿಯಲ್ಲಿ ಬೆಳಗ್ಗೆ 11-30 ರ ಸಮಯದಲ್ಲಿ ರಮೇಶ್ ಮತ್ತು 1 ನೇ ಪ್ರತಿವಾದಿರವರಿಗೆ ನೀಡಿರುತ್ತಾರೆ. 5 ಲಕ್ಷ ರೂಗಳನ್ನು ಯಾವ ಮುಖ ಬೆಲೆಯ ನೋಟಗಳಲ್ಲಿ ನೀಡಲಾಗಿರುತ್ತದೆ ಎಂದು ನನಗೆ ತಿಳಿದಿರುವುದಿಲ್ಲ. 1 ನೇ ಪ್ರತಿವಾದಿ ಮತುತ ಅವರ ಗಂಡ ರಮೇಶ್ ಕ್ರಯದ ಮುಂಗಡ ಹಣದಲ್ಲಿ ಎಷ್ಟು ಎಷ್ಟ ಹಣ ತೆಗೆದುಕೊಂಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪ ತ್ರದಲ್ಲಿ ಹೇಳಿರುವಂತೆ ವಾದಿ ರವರು 5 ಲಕ್ಷ ಮುಂಗಡ ಹಣವನ್ನು 1 ನೇ ಪ್ರತಿವಾದಿ ಮತ್ತು ಅವರ ಗಂಡನ ಕೈಗೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಮತ್ತು ಅವರ ಗಂಡ ರಮೇಶ್ ರವರು ಮಾರಾಟ ಮಾಡುತ್ತೇವೆ ಎಂದು ಯಾವುದೇ ಕರಾರು ಪತ್ರವನ್ನು ವಾದಿಗೆ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪತ್ರ ಬರಹಗಾರರಾದ ಬೈರಯ್ಯನವರು ಸೃಷ್ಟಿಸಿದ ಕರಾರು ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ 1 ನೇ ಪ್ರತಿವಾದಿ ಸಹ ನಿಪಿ-1 ರ ಕರಾರು ಪತ್ರಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಪತ್ರದ ವ್ಯವಹಾರದ ಬಗ್ಗೆ ಏನೂ ಗೊತ್ತಿಲ್ಲದೇ ಇದ್ದರೂ ಸಹ ವಾದಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವಾಗಲೂ ಪತ್ರ ಬರಹಗಾರರ ಕಛೇರಿಗಳಲ್ಲಿ ಕುಳಿತುಕೊಂಡಿರುವ ಕಾರಣ ಯಾರು ಯಾರು ಸಾಕ್ಷಿದಾರರಾಗಿ ಸಹಿ ಮಾಡಲು ಕೇಳಿಕೊಳ್ಳುತ್ತಾರೆ ಅವರಿಗೆಲ್ಲಾ ಹೋಗಿ ನಾನು ಸಾಕ್ಷಿ ಸಹಿ

ಮಾಡುತ್ತೇನೆ ಮತ್ತು ಅದನ್ನೇ ನಾನು ಪ್ರವೃತ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ಕಾರಣ ನಾನು ಇಲ್ಲಿಯವರೆಗೂ ಎಷ್ಟು ನೋಂದಣಾಯಿತ ದಾಖಲೆಗಳಿಗೆ ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ ಎಂದು ಸಾಧ್ಯವಾಗುತ್ತಿಲ್ಲ ಎಂದರೆ ಸರಿಯಲ್ಲ. ಕರಾರು ಪತ್ರವಾಗುವ ಸಮಯದಲ್ಲಿ 1 ನೇ ಪ್ರತಿವಾದಿರವರು ನನಗೆ ಯಾರು ಎಂದು ತಿಳಿಯದೇ ಇದ್ದರೂ ಸಹ ಈ ದಿನ ನಾನು ವಾದಿಯವರ ನನ್ನ ಸ್ನೇಹಿತರಾಗಿರುವ ಕಾರಣ ಅವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನೀವು ಪತ್ರ ಬರಹಾಗರರು ಕೇಳಿಕೊಂಡಂತೆ ನೋಂದಾಯಿತ ದಾಖಲೆಗಳಿಗೆ ಸಾಕ್ಷಿ ಸಹಿ ಮಾಡುವುದರಿಂದ ಯಾರು ಯಾರು ಬರೆದುಕೊಂಡಿರುತ್ತಾರೆ ಮತ್ತು ಎಷ್ಟು ದಾಖಲೆಗಳಿಗೆ ಸಹಿ ಮಾಡಿರುತ್ತೇನೆ ಎಂದು ಹೇಳಲು ಬರುತ್ತಿಲ್ಲ ಎಂದರೆ ಸಾಕ್ಷಿ ಸಾಕ್ಷಿ ಸಹಿ ಮಾಡಿರುತ್ತೇನೆ ಆದರೆ ನನಗೆ ಈಗ ನೆನಪಾಗುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈ ಹಿಂದೆಯೂ ಸಹ ವಾದಿಯೊಂದಿಗೆ ನ್ಯಾಯಾಲಯಕ್ಕೆ ಹಾಜರಾಗಿರುತ್ತೀರಾ ಎಂದರೆ ಸರಿಯಲ್ಲ. ನಿಪಿ-1 ಕರಾರು ಪತ್ರದ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ 1 ನೇ ಪ್ರತಿವಾದಿ ಮತ್ತು ಅವರ ಗಂಡ ರಮೇಶ್ ರವರು ವಾದಿಗೆ ಕರಾರು ಪತ್ರವನ್ನು ಮಾಡಿಕೊಟ್ಟಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.